## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **979** |
| **ಸದಸ್ಯರ ಹೆಸರು** | : | **ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | : | **25.08.2026** |
| **ಉತ್ತರಿಸುವ ಸಚಿವರು** | : | **ಮುಜರಾಯಿ, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು.** |

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ) | ಹೊನ್ನಾವರ ಬಂದರಿನ ಕಾಸರಕೋಡಿನಲ್ಲಿ ಬಂದರು ಇಲಾಖೆ ಅಧೀನದಲ್ಲಿರುವ ಪ್ರದೇಶದ ಕ್ಷೇತ್ರ ಎಷ್ಟು; ಈಗಾಗಲೇ ಈ ಪ್ರದೇಶದಲ್ಲಿ ಎಷ್ಟು ಮನೆಗಳು ಅತಿಕ್ರಮಿಸಿಕೊಂಡಿವೆ: ಎಷ್ಟು ವರ್ಷದಿಂದ ಅತಿಕ್ರಮಿಸಿಕೊಂಡಿದೆ; ಈ ಮೀನುಗಾರರ ಭವಿಷ್ಯವೇನು; | ಹೊನ್ನಾವರ ಬಂದರಿನ ಕಾಸರಕೋಡಿನಲ್ಲಿ ಸರ್ವೆ ನಂಬರ್ ಹೊಂದಿರುವ ಬಂದರು ಜಾಗದ ಒಟ್ಟು ವಿಸ್ತೀರ್ಣ 5,22,615.06 ಚ.ಮೀ (129-05-10.25) ಇರುತ್ತದೆ. ಇದರಲ್ಲಿ ರಾಷ್ಟ್ರೀಯ ಹೆದ್ದಾರಿ – 66 ಕ್ಕೆ ರಸ್ತೆ ಅಗಲೀಕರಣಕ್ಕಾಗಿ 01 ಎಕರೆ 08 ಗುಂಟೆ ಜಾಗವನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಭೂಸ್ವಾಧೀನಪಡಿಸಿಕೊಂಡಿರುತ್ತದೆ. ಉಳಿದ 5,17,316.39 ಚ.ಮೀ. (127-37-10.25) ಜಾಗವು ಕರ್ನಾಟಕ ಜಲಸಾರಿಗೆ ಮಂಡಳಿಯ ಅಧೀನದಲ್ಲಿ ಇರುತ್ತದೆ.<br><br>ಹೊನ್ನಾವರ ಬಂದರು ಅಭಿವೃದ್ಧಿ ಯೋಜನೆಗೆ 1967-68 ನೇ ಸಾಲಿನಲ್ಲಿ ಮ್ಯಾಂಗನೀಸ್ ಅದಿರು ಸಂಗ್ರಹಿಸುವ ಉದ್ದೇಶಕ್ಕೆ ಈ ಹಿಂದಿನ ವಾಸ್ತವ್ಯದಾರರ ಭೂಮಾಲಿಕರಿಂದ 30 ಎಕರೆ 23 ಗುಂಟೆ 10/14 ಆಣೆ ಜಾಗವನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದ್ದು, ಸದರಿ ಯೋಜನೆಯು ಜಾರಿಗೆ ಬಾರದೇ ಇರುವುದರಿಂದ ಈ ಹಿಂದೆ ಸದರಿ ಜಾಗದಲ್ಲಿ ವಾಸ್ತವ್ಯ ಹೂಡಿದ ಸುಮಾರು 123 ಮನೆಗಳು 56 ವರ್ಷದಿಂದ ಜಾಗವನ್ನು ಅತಿಕ್ರಮಿಸಿಕೊಂಡಿರುತ್ತಾರೆ. ಸದರಿ ಅತಿಕ್ರಮಿಸಿಕೊಂಡು ವಾಸವಾಗಿರುವ ಮೀನುಗಾರರಿಗೆ ಈ ಹಿಂದೆ ಭೂಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ ಪರಿಹಾರವನ್ನು ನೀಡಿಯೇ ಭೂಮಿಯನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿರುತ್ತದೆ. |
| ಆ) | ಹೆಚ್.ಪಿ.ಪಿ.ಎಲ್. ಖಾಸಗಿ ವಾಣಿಜ್ಯ ಬಂದರಿಗೆ ಬಾಡಿಗೆಗೆ ನೀಡಿರುವ ಕ್ಷೇತ್ರವೆಷ್ಟು; | ಹೊನ್ನಾವರ ಬಂದರು ಕಾಸರಕೋಡಿನಲ್ಲಿರುವ M/s. Honnavar Port Private Limited (HPPL) ರವರಿಗೆ ಖಾಸಗಿ ವಾಣಿಜ್ಯ ಬಂದರು ಅಭಿವೃದ್ಧಿ ಹಾಗೂ ಸಂಬಂಧಿತ ಬಂದರು ಚಟುವಟಿಕೆಗಳಿಗಾಗಿ ಕಾಸರಕೋಡ ಬದಿಯಲ್ಲಿ 40,000 ಚ.ಮೀ. ಬಂದರು ಜಾಗವನ್ನು ಮತ್ತು ಹೊನ್ನಾವರ ಬದಿಯಲ್ಲಿ 40,000, 36,000, 1,560 ಚ.ಮೀ. ಹೀಗೆ ಒಟ್ಟು 1,37,560 ಚ.ಮೀ ಬಂದರು ಜಾಗವನ್ನು ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲಾಗಿರುತ್ತದೆ.<br>ಆದರೆ ಹೊನ್ನಾವರ ಬದಿಯಲ್ಲಿರುವ 97,560 ಚ.ಮೀ ಬಂದರು ಭೂಮಿಯು ನೀರಿನಿಂದ ಆವೃತ್ತವಾಗಿದ್ದು ಮ್ಯಾಂಗ್ರೂವ್ ಗಿಡಗಳು ಬೆಳೆದಿರುವುದರಿಂದ ಸದರಿ ಭೂಮಿಗಳಲ್ಲಿ ಯಾವುದೇ ಭೌತಿಕ ಚಟುವಟಿಕೆಗಳನ್ನು ಕೈಗೊಳ್ಳಲು ಸಾಧ್ಯವಿರದ ಕಾರಣ M/s. Honnavar Port Private Limited (HPPL) ಸಂಸ್ಥೆಯವರು ಸದರಿ ಬಂದರು ಭೂಮಿಯನ್ನು ಅಧ್ಯರ್ಪಿಸುವುದಾಗಿ ತಿಳಿಸಿದ್ದು, ಸದರಿ ಭೂಮಿಯನ್ನು ಹಿಂಪಡೆಯುವ ಕುರಿತು ಪರಿಶೀಲಿಸಲಾಗುತ್ತಿದೆ. |

| | | |
|---|---|---|
| ಇ) | ಈ ಕ್ಷೇತ್ರಕ್ಕೆ ಕಳೆದ 10 ವರ್ಷದಲ್ಲಿ ಸಂದಾಯವಾದ ಬಾಡಿಗೆ ಎಷ್ಟು; (ವರ್ಷವಾರು ವಿವರ ಒದಗಿಸುವುದು) | M/s Honnavar Port Private Ltd., (HPPL) ಸಂಸ್ಥೆಯವರಿಗೆ ಬಾಡಿಗೆ/ಗುತ್ತಿಗೆ ಆಧಾರದ ಮೇಲೆ ನೀಡಿರುವ ಬಂದರು ಜಾಗಕ್ಕೆ ಸಂಬಂಧಿಸಿದಂತೆ ಕಳೆದ 10 ವರ್ಷಗಳಲ್ಲಿ ರೂ. 54,01,632/- ಗಳನ್ನು ಭೂ ಬಾಡಿಗೆಯಾಗಿ ಪಾವತಿಸಿರುತ್ತಾರೆ.(ವಿವರಗಳು ಅನುಬಂಧ-1 ರಲ್ಲಿ ನೀಡಿದೆ) |
| ಈ) | ಹೆಚ್.ಪಿ.ಪಿ.ಎಲ್ ಖಾಸಗಿ ವಾಣಿಜ್ಯ ಬಂದರಿಗೆ ನೀಡಿದ ಕ್ಷೇತ್ರಕ್ಕಿಂತ ಹೆಚ್ಚು ಕ್ಷೇತ್ರ ಬಳಕೆಗೆ ನೀಡಲಾಗಿದೆಯೆ? (ನೀಡಿದಲ್ಲಿ, ವಿವರ ಒದಗಿಸುವುದು) | ಮೇ\|\| ಹೊನ್ನಾವರ ಪೋರ್ಟ್ ಪ್ರೈ..ಲಿ ಗೆ ಗುತ್ತಿಗೆ ಆಧಾರದ ಮೇಲೆ ನೀಡಿರುವ ಕ್ಷೇತ್ರಕ್ಕಿಂತ ಹೆಚ್ಚು ಕ್ಷೇತ್ರವನ್ನು ಬಳಕೆಗೆ ಅವಕಾಶ ನೀಡಿರುವುದಿಲ್ಲ. |

**IDD 99 PSP 2026**

**(ಕೆ.ಎಸ್. ಬಸವಂತಪ್ಪ)**
**ಮುಜರಾಯಿ, ಮೀನುಗಾರಿಕೆ, ಬಂದರು**
**ಮತ್ತು ಒಳನಾಡು ಜಲಸಾರಿಗೆ ಸಚಿವರು**

## ಅನುಬಂಧ-1

| ಕ್ರ. ಸಂ. | ವರ್ಷ | ಹೊನ್ನಾವರ | | | | ಕಾಸರಕೋಡ |
|---|---|---|---|---|---|---|
| | | **20,000 ಚ. ಮೀ.** | **40,000 ಚ. ಮೀ.** | **36,000 ಚ. ಮೀ.** | **1,560 ಚ. ಮೀ.** | **40,000 ಚ. ಮೀ.** |
| **1** | **2** | **3** | **4** | **5** | **6** | **7** |
| **1** | 2016-17 | 6,37,762 | 1,92,000 | 1,72,800 | 28,080 | 1,92,000 |
| **2** | 2017-18 | 7,01,538 | 1,92,000 | 1,72,800 | 28,080 | 1,92,000 |
| **3** | 2018-19 | 7,71,692 | 1,92,000 | 1,72,800 | 28,080 | 1,92,000 |
| **4** | 2019-20 | - | - | - | - | 1,92,000 |
| **5** | 2020-21 | - | - | - | - | 1,92,000 |
| **6** | 2021-22 | - | - | - | - | 1,92,000 |
| **7** | 2022-23 | - | - | - | - | 2,40,000 |
| **8** | 2023-24 | - | - | - | - | 2,40,000 |
| **9** | 2024-25 | - | - | - | - | 2,40,000 |
| **10** | 2025-26 | - | - | - | - | 2,40,000 |
| **ಒಟ್ಟು** | | **21,10,992/-** | **5,76,000/-** | **5,18,400/-** | **84,240/-** | **21,12,000/-** |

M/s Honnavar Port Private Ltd., (HPPL) ಸಂಸ್ಥೆಯವರು ಕಳೆದ 10 ವರ್ಷಗಳಲ್ಲಿ ಈವರೆಗೆ ಸರ್ಕಾರಕ್ಕೆ ಪಾವತಿಸಿರುವ ಒಟ್ಟೂ ಭೂಬಾಡಿಗೆ **ರೂ. 54,01,632/-** ಆಗಿರುತ್ತದೆ.

ನಿರ್ದೇಶಕರು,
ಬಂದರು ಮತ್ತು ಸದಸ್ಯರು,
(ಜಲಸಾರಿಗೆ ಮತ್ತು ಒಳನಾಡು ಜಲಸಾರಿಗೆ ನಿರ್ವಹಣೆ),
ಕರ್ನಾಟಕ ಜಲಸಾರಿಗೆ ಮಂಡಳಿ,
ಕಾರವಾರ.